(ಇಂದು ದಿನಾಂಕಃ **17/07/2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಎಂ.ಎನ್.ಪಿ. (ಎಂ.ಎಚ್.ಬಿ.) ವಕೀಲರಿಂದಃ-**

10. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ನಿಜ ಇರುತ್ತದೆ. ನಾನು ಹಾಜರುಮಾಡಿದ ಎದುರುದಾರರ ಆದೇಶವನ್ನು ನಿಪಿ-1, ವೈದ್ಯಕೀಯ ಪ್ರಮಾಣ ಪತ್ರವನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಎದುರುದಾರರ ಪರ ಶ್ರೀ ಎಸ್.ಆರ್.ಪಿ. ವಕೀಲರಿಂದಃ-**

11. ದಿನಾಂಕಃ26/05/2017 ರಂದು ನಾನು ಹಾನಗಲ್ಲ ಘಟಕದಲ್ಲಿ ಕೆಲಸ ಮಾಡುತ್ತಿದ್ದೆ. ದಿನಾಂಕಃ26/05/2017 ರಿಂದ 09/10/2017 ರವರೆಗೆ ನಾನು ಕೆಲಸಕ್ಕೆ ಗೈರು ಹಾಜರಾಗಿದ್ದೆ ಎನ್ನುವುದು ನಿಜ. ನಾನು ಗೈರು ಹಾಜರಾಗುವ ಮುಂಚೆ ಅನುಮತಿ ಕೇಳಿದ್ದೆ, ಆದರೆ ಎದುರುದಾರರು ದಾಖಲೆ ನೀಡಲಿಲ್ಲ.

12. ವಿಚಾರಣೆ ಕುರಿತು ದೋಷಾರೋಪಣಾ ಪತ್ರ ನೀಡಿದ ನಂತರ ನಾನು ಕೆಲಸಕ್ಕೆ ಹಾಜರಾಗಲು ಅವಕಾಶ ನೀಡಲಾಗಿತ್ತು ಎನ್ನುವುದು ನಿಜ. ಆದಾಗ್ಯೂ ನಾನು ಕೆಲಸಕ್ಕೆ ಹಾಜರಾಗಲಿಲ್ಲ ಎನ್ನುವುದು ಸುಳ್ಳು. ನಾನು ವಿಚಾರಣಾಧಿಕಾರಿ ಮುಂದೆ ಹಾಜರಾಗಿದ್ದೇನೆ. ವಿಚಾರಣೆ ಕಾಲಕ್ಕೆ ಎದುರುದಾರರು ಸಾಕಷ್ಟು ಸಾಕ್ಷಿ ಹಾಜರಮಾಡಿದ್ದರು ಎನ್ನುವುದು ಸುಳ್ಳು. ಎದುರುದಾರರ ಸಾಕ್ಷಿದಾರರಿಗೆ ನಾನು ಪಾಟೀ ಸವಾಲು ಮಾಡಿದ್ದೇನೆ ಎನ್ನುವುದು ಸುಳ್ಳು. ನಾನು ಸಂರಕ್ಷಣಾ ಹೇಳಿಕೆ ಕೊಟ್ಟೆ ಎನ್ನುವುದು ನಿಜ. ಇಂದು ಗುರುತಿಸಲಾದ ನಿಪಿ-2 ಮತ್ತು 3 ನ್ನು ವಿಚಾರಣೆ ಕಾಲಕ್ಕೆ ಹಾಜರುಮಾಡಿದ್ದೆ ಆದರೆ ಸ್ವೀಕೃತಿ ಪತ್ರ ಪಡೆದಿಲ್ಲ. ನಿಪಿ-2 ಮತ್ತು 3 ದಾಖಲೆಗಳನ್ನು ನಾನು ಈ ಮುಂಚೆ ಹಾಜರುಮಾಡಿಲ್ಲ, ಈಗ ಅವುಗಳನ್ನು ಸೃಷ್ಟಿಸಿದ್ದೇನೆ ಎನ್ನುವುದು ಸುಳ್ಳು.

13. ನಾನು ಕರ್ತವ್ಯಕ್ಕೆ ಗೈರು ಹಾಜರಾಗಿದ್ದೆ ಎಂದು 24 ಬಾರಿ ಪ್ರಕರಣ ನೋಂದಾಗಿದ್ದವು ಎನ್ನುವುದು ನಿಜ. ಎಲ್ಲಾ ಪ್ರಕರಣಗಳಲ್ಲಿ ಕಡಿಮೆ ಪ್ರಮಾಣದ ಶಿಕ್ಷೆ ವಿಧಿಸಿದ್ದಾರೆ ಎನ್ನುವುದು ಸುಳ್ಳು. ಸಂಬಳ ಬಡ್ತಿ ನಿಲ್ಲಿಸಿದ್ದಾರೆ.

14. 2005 ರಲ್ಲಿ ನಾನು ಚಿಕ್ಕೋಡಿಯಲ್ಲಿ ಕೆಲಸ ಮಾಡುತ್ತಿದ್ದಾಗ ಕೆಲಸದಿಂದ ವಜಾ ಮಾಡಿದ್ದರು ಎನ್ನುವುದು ನಿಜ. ಸದರಿ ಆದೇಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ, ಆದೇಶ ಪಡೆದು 2011 ರಲ್ಲಿ ಕರ್ತವ್ಯಕ್ಕೆ ಹಾಜರಾದೆ ಎನ್ನುವುದು ನಿಜ. ಸರಿಯಾದ ಮತ್ತು ಸಂಪೂರ್ಣವಾದ ವಿಚಾರಣೆ ನಡೆಸಿ ವರದಿ ಸಲ್ಲಿಸಲಾಗಿದೆ ಎನ್ನುವುದು ಸುಳ್ಳು. ಯಾವುದೇ ನಿಯಮವನ್ನು ಉಲ್ಲಂಘಿಸಿಲ್ಲ ಎನ್ನುವುದು ಸುಳ್ಳು. ನಾನು ಯಾವುದೇ ಪರಿಹಾರಕ್ಕೆ ಅರ್ಹನಲ್ಲ ಎನ್ನುವುದು ಸುಳ್ಳು.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.